

# ಥಾಯ್ಲ್ಯಾಂಡಿನ ಪುರವಂತರು!

ನಮ್ಮಲ್ಲಿ ವೀರಭದ್ರ ದೇವರ ಪೂಜೆ ಮಾಡುವಾಗ ಪುರವಂತರು ತಮ್ಮ ಕಪಾಳಗಳ ಮೂಲಕ ಶಸ್ತ್ರ ಹಾಕಿಕೊಳ್ಳುವ ಸಂಪ್ರದಾಯವನ್ನು ನೋಡಿದ್ದೇವೆ. ವೀರಭದ್ರನನ್ನು ಮನೆ ದೇವರಾಗಿ ಹೊಂದಿರುವವರು ಯಾವುದೇ ಶುಭ ಕಾರ್ಯಕ್ರಮಗಳನ್ನು ಶಸ್ತ್ರ ಹಾಕಿಕೊಳ್ಳುವ ಮೂಲಕ ಆಚರಿಸುತ್ತಾರೆ.

ಇದಕ್ಕೆಂದೇ 'ಪುರವಂತರು' ಇರುತ್ತಾರೆ. ಅವರು ಜೀವ ಶಸ್ತ್ರ, ಪಾಣಿ ಶಸ್ತ್ರ, ಕಪ್ಪೆ ಶಸ್ತ್ರ ಮತ್ತು ಗುಪ್ತ ಶಸ್ತ್ರ ಮುಂತಾಗಿ ವಿವಿಧ ರೀತಿಯ ಶಸ್ತ್ರಗಳನ್ನು ಹಾಕಿಕೊಳ್ಳುತ್ತಾರೆ.

ಆದರೆ ಥಾಯ್ಲ್ಯಾಂಡಿನ ಫುಕೆಟ್ ದ್ವೀಪದಲ್ಲಿ ಒಂಭತ್ತು ದಿನಗಳ ಕಾಲ ನಡೆಯುವ 'ತೆಸಗಾನ್ ಜಿನ್ ಜೆ' ಹಬ್ಬದಲ್ಲಿ ಈ ಚೀನೀಯರು ಹಾಕಿಕೊಳ್ಳುವ ಶಸ್ತ್ರದ ಆಚರಣೆ ನೋಡುವವರ ಮೈನವಿರೇಳಿಸುವಂತಿವೆ.

ಚೀನೀಯರ ನಂಬಿಕೆ ಪ್ರಕಾರ, ಹೀಗೆ ಶಸ್ತ್ರ ಹಾಕಿಕೊಳ್ಳ ಬಯಸುವವರು ಆ ದಿನಗಳಲ್ಲಿ ಮಾಂಸ, ಮದ್ಯ ಸೇವನೆ, ಧೂಮಪಾನದಿಂದ ದೂರ ಇರಬೇಕು. ಲೈಂಗಿಕ ಕ್ರಿಯೆಯಲ್ಲೂ ತೊಡಗಿರಬಾರದು.

ಗಲ್ಲ, ಮೂಗು, ತುಟಿ, ಕಿವಿ ಮತ್ತಿತರ ಕಡೆಗಳಲ್ಲಿ ಸ್ಥಳ ಇಲ್ಲದಷ್ಟು ಶಸ್ತ್ರಗಳನ್ನು ಇವರು ಹಾಕಿಕೊಳ್ಳುತ್ತಾರೆ. ಶಸ್ತ್ರಗಳಲ್ಲಿ ಉದ್ದನೆಯ ಸಲಾಕೆ, ದಪ್ಪನೆಯ ಸಲಾಕೆ, ಹಾರೆ ಕೋಲಿನಂತಹ ಆಯುಧ, ಪಿಸ್ತೂಲ್ ಮತ್ತಿತರ ವಸ್ತುಗಳೂ ಇವೆ!

ಈ ಹಬ್ಬವನ್ನು ಪಕ್ಕಾ ಸಸ್ಯಾಹಾರಿಗಳ ಹಬ್ಬ ಎಂದೂ ಇಲ್ಲಿನವರು ಘೋಷಿಸುತ್ತಾರೆ. ಶಸ್ತ್ರಗಳನ್ನು ಮುಖದ ತುಂಬ ಚುಚ್ಚಿ ದೇವರ ಚಿತ್ರಪಟಗಳನ್ನು ಎದೆಗೆ ನೇತು ಹಾಕಿಕೊಂಡು ಕುಣಿಯುತ್ತಾರೆ.

■ ಮಾವ



